**ತೆಲುಗು ಮೂಲ: ಪೂಡೂರಿ ರಾಜಿರೆಡ್ಡಿ**
**ಕನ್ನಡಕ್ಕೆ: ಜಗದೀಶ್ ಚಂದ್ರ ಬಾಗಲಿ**

# ನಗರದಲ್ಲಿ ಮಳೆ

ಅಷ್ಟರಲ್ಲೇ ಎಷ್ಟು ಬದಲಾವಣೆ! ನಿನ್ನೆಯವರೆಗೆ 'ಬಿಸಿಲಲ್ಲಿ ತಿರುಗಾಡಬೇಡ' ಎಂದು ಮಕ್ಕಳನ್ನು ಎಚ್ಚರಿಸಿದ ಹಿರಿಯರು ಇಂದಿನಿಂದ 'ಮಳೆಯಲ್ಲಿ ನೆನೆಯಬೇಡ' ಎನ್ನುತ್ತಾರೆ. ನೆನ್ನೆಗೆ ಇಂದಿಗೆ ಯಾವ ವ್ಯತ್ಯಾಸ ಇದೆಯೋ... ಅಂತಹುದೇನು ವಿಶೇಷವಾದದ್ದು ಆಯಿತೋ ಅರ್ಥವಾಗದೇನೇ ಮಳೆಗಾಲ ಬಂದುಬಿಟ್ಟಿದೆ. ಮೊನ್ನೆಯಂತೆಯೇ ನಿನ್ನೆ ಕೂಡಾ ಇಲ್ಲಿ ಚನ್ನಾಗಿ ಮಳೆ ಬಂದಿದೆ. ಬಹುಶಃ ಅದಕ್ಕಾಗಿಯೇ ಏನೋ ಇಂದಿನ ಬೆಳಗು ಅದ್ಭುತವಾಗಿದೆ. ವಾತಾವರಣದಲ್ಲಿ ಯಾವುದೋ ಒಂದು ಸ್ವಚ್ಛತೆ ಕಾಣಿಸುತ್ತಿದೆ. ಗಾಳಿಯಲ್ಲಿ ಹಿತವಾದ ತಂಪು ಬೆಸೆದುಕೊಂಡಿದೆ. ಮಾಯದ ಗಾಳಿ ಇದು. ಆಹ್ಲಾದದ ಗಾಳಿ ಕೂಡ!

ಮಲ್ಲಿಗೆ, ಕಣಗಿಲ ಮತ್ತು ಮಂದಾರದ ಗಿಡಗಳು... ಎಲೆ ಎಲೆಗಳು ಕೂಡಾ ಯಾರೋ ಶುಭ್ರವಾಗಿ ತೊಳೆದಿದ್ದಾರೇನೋ ಎನ್ನುವಂತೆ ಥಳ ಥಳ ಹೊಳೆಯುತ್ತಿವೆ. ಕರಿಬೇವಿನ ಗಿಡವೊಂದು... ಗಾಳಿಯ ಬೆಂಬಲವಿರುವ ಹನಿಗಳ ಧಾಟಿಗೆ ಬಾಗಿಹೋಗಿದೆ.

ಬಾಗಿಲ ಮುಂದೆ ನಿಂತ ನೀರನ್ನು ಗೃಹಿಣಿಯೊಬ್ಬಳು ಕೆಳಕ್ಕೆ ಬಳಿಯುತ್ತಿದ್ದಾಳೆ. ಇನ್ನೊಬ್ಬಾಕೆ ಮಳೆಯನ್ನು ಲೆಕ್ಕಿಸದೆ ರಂಗೋಲಿ ಹಾಕುತ್ತಿದ್ದಾಳೆ. ರಾತ್ರಿ ಮೂತ್ರಿಸಿದ ಮಗುವಿನ ಹಾಸುಗೆಯನ್ನು ತಾಯಿಯೊಬ್ಬಳು ತಂತಿಯ ಮೇಲೆ ಒಣಗಿ ಹಾಕುತ್ತಿದ್ದಾಳೆ. ಎಲ್ಲಿಂದಲೋ ಕೊಚ್ಚಿಕೊಂಡು ಬಂದು ಮನೆ ಮುಂದೆ ಚಲ್ಲಾಪಿಲ್ಲಿಯಾಗಿದ್ದ ಕಸ–ಕೊಳೆಯನ್ನು ಬಳಿದು ಹಾಕಲು ವೃದ್ಧ ದಂಪತಿ ಸಿದ್ಧವಾಗಿದ್ದಾರೆ. ಮಳೆ ಎಲ್ಲವನ್ನೂ ಸ್ವಚ್ಛಗೊಳಿಸುತ್ತದೆ ಎನ್ನುತ್ತಾರೆ. ಆದರೆ ಇದರ ಸ್ವಚ್ಛತೆ ಹೇಗಿರುತ್ತದೆಯೆಂದರೆ... ಇಲ್ಲಿ ಸ್ವಚ್ಛ ಮಾಡಿದ್ದು ಕೆಳಕ್ಕೆ ಹೋಗುತ್ತದೆ. ಮೇಲೆ ಸ್ವಚ್ಛ ಮಾಡಿದ್ದು ನಮಗೆ ಬರುತ್ತದೆ. ಇದು ಬಲು ತುಂಟಾಟದ ಮಳೆ!



ವೆಂಕಟ್ರಮಣ ಭಟ್